# ಹಾಮಾನನಿಗಾದ ದಂಡನೆ

✍ ಸುನಯನ ವಾಲ್ಟರ್ಸ್

ಎಸ್ತೇರಳು ರಾಣಿಯಾದ ಕಥೆ ನಮಗೆಲ್ಲರಿಗೂ ಗೊತ್ತು. ರಾಜನನ್ನೂ, ಅವನ ಸ್ನೇಹಿತನಾಗಿದ್ದ ಹಾಮಾನನನ್ನೂ ಎಸ್ತೇರ್ ರಾಣಿಯು ಭೋಜನಕ್ಕೆ ಆಹ್ವಾನಿಸಿದಳು. ಹಾಮಾನನು ಬಹಳ ಸಂತೋಷದಿಂದಿದ್ದನು. ಔತಣವು ಮೂರನೇ ದಿನ ರಾಣಿಯ ಗೃಹದಲ್ಲಿ ನಡೆಯಲಿತ್ತು.




ಹಾಮಾನನು ಮನೆಗೆ ಹೋಗಿ ಆ ಆಮಂತ್ರಣದ ಬಗ್ಗೆ ಜಂಭ ಕೊಚ್ಚಿಕೊಂಡನು. ಎಲ್ಲರೂ ತನ್ನ ಮುಂದೆ ತಲೆಬಾಗುತ್ತಾರೆ. ಆದರೆ ಯೆಹೂದಿಯಾದ ಮೊರ್ದೆಕೈ ಒಬ್ಬನದೇ ಸಮಸ್ಯೆ ಎಂದು ಕುಟುಂಬ ಸದಸ್ಯರ ಮುಂದೆ ಹೇಳಿದಾಗ ಅವನ ಹೆಂಡತಿ ಎಂದಳು – "ಅವನನ್ನು ಗಲ್ಲಿಗೇರಿಸು!" "50 ಅಡಿ ಎತ್ತರದ ಗಲ್ಲುಕಂಬ ಸಿದ್ಧಪಡಿಸು. ಎಲ್ಲರೂ ಅದನ್ನು ನೋಡುವಂತಾಗಲಿ" ಇದು ಅವನ ಆಪ್ತರ ಸಲಹೆಯಾಗಿತ್ತು. ಹಾಮಾನನು ಇದಕ್ಕೆ ಸಮ್ಮತಿಸಿ ಗಲ್ಲುಕಂಬ ಸಿದ್ಧಪಡಿಸಿದನು.

ಆದರೆ ಸತ್ಯವೇದ ಹೇಳುವಂತೆ ಹಾಮಾನನು ತಿಳಿದಿರದಿದ್ದ ವಿಷಯ ಒಂದಿತ್ತು. ಶೂಶನ್ ಅರಮನೆಯ ದ್ವಾರಪಾಲಕರಿಬ್ಬರು ಹಿಂದೊಮ್ಮೆ ಅರಸನ ಮೇಲಿನ ದ್ವೇಷದಿಂದ ಅವನನ್ನು ಕೊಲ್ಲಲು ಸಂಚುನಡೆಸಿದ್ದನ್ನು ಕೇಳಿಸಿಕೊಂಡಿದ್ದ ಮೊರ್ದೆಕೈ, ಆ ವಿಷಯವನ್ನು ಅರಸನಿಗೆ ಅರಿಕೆಮಾಡಿದ್ದನು. ಅವರ ವಿಚಾರಣೆಯಾಗಿ ಅವರಿಗೆ ಗಲ್ಲುಶಿಕ್ಷೆಯಾಗಿ, ಅರಸನಿಗೆ ಬಂದ ಆಪತ್ತು ತಪ್ಪಿತ್ತು. ಈ ವಿಷಯವು ಅರಮನೆಯ ವೃತ್ತಾಂತಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿತ್ತು.

ಆ ರಾತ್ರಿ ರಾಜನಾದ ಅಹಷ್ವೇರೊಷನಿಗೆ ನಿದ್ರೆ ಬರಲಿಲ್ಲ. ಹಾಗಾಗಿ ಸೇವಕರನ್ನು ಕರೆದು ಪೂರ್ವವೃತ್ತಾಂತಗಳ ಪುಸ್ತಕವನ್ನು ತರಿಸಿ ಓದಿಸಿದನು. ಮೊರ್ದೆಕೈಯ ವೃತ್ತಾಂತವು ಆಗ ಓದಲ್ಪಟ್ಟಿತು. ಈ ಸಹಾಯಕ್ಕಾಗಿ ಮೊರ್ದೆಕೈಗೆ ಯಾವ ಸ್ಥಾನಮಾನಗಳು ಕೊಡಲ್ಪಟ್ಟವು ಎಂದು ಅರಸನು ವಿಚಾರಿಸಿದಾಗ ಅಂತಹದೇನೂ ಕೊಡಲ್ಪಟ್ಟಿಲ್ಲವೆಂದು ತಿಳಿದುಬಂತು.

ಕೆಲವು ಬಾರಿ ಮನುಷ್ಯರ ಮರೆಯುವಿಕೆ ಕೂಡಾ ದೇವರ ಚಿತ್ತವೇ ಎಂದು ಇಲ್ಲಿ ಕಂಡುಬರುತ್ತದೆ. ಏಕೆಂದರೆ ಹಾಮಾನನು ದುರ್ಯೋಚನೆಗೆ ವಿರುದ್ಧವಾದ ಶಕ್ತಿಯು ದೇವರ ಶಕ್ತಿಯಾಗಿತ್ತು. ಅರಸನು ಕೂಡಲೇ ಕಾರ್ಯಪ್ರವೃತ್ತನಾದನು. ಮೊರ್ದೆಕೈಯನ್ನು ಗಲ್ಲಿಗೇರಿಸಲು ರಾಜನ ಅನುಮತಿ ಪಡೆಯುವ ಉದ್ದೇಶದಿಂದ ಬೇಗನೇ ಬಂದ ಹಾಮಾನನು ಪ್ರಾಕಾರದಲ್ಲಿದ್ದನು. ಅರಸನು ಹಾಮಾನನಿಗೆ ಆಜ್ಞೆ ಇತ್ತಂತೆ, ತಾನು ಕೊಲ್ಲಬೇಕೆಂದಿದ್ದ ಮೊರ್ದೆಕೈಯನ್ನು ತಾನೇ ರಾಜವಸ್ತ್ರಧಾರಣೆ ಮಾಡಿಸಿ, ಪಟ್ಟದ ಕುದುರೆಯ ಮೇಲೆ ಕುಳ್ಳಿರಿಸಿ ಮಹಾಗೌರವದಿಂದ ಪಟ್ಟಣದಲ್ಲಿ ಮೆರವಣಿಗೆ ಮಾಡಿಸಬೇಕಾಯಿತು.

*"ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ, ಸಂಕಟವೂ ಬರುವುವು. ಆದರೆ ಒಳ್ಳೇದನ್ನು ನಡಿಸುವ ಪ್ರತಿಯೊಬ್ಬನಿಗೆ ಪ್ರಭಾವವೂ, ಮಾನವೂ, ಮನಶಾಂತಿಯೂ ಉಂಟಾಗುವುವು"* (ರೋಮಾ 2:9–10).

ದೇವರಿಗೆ ನಮ್ಮ ಎಲ್ಲಾ ಗುಟ್ಟುಗಳೂ ತಿಳಿದಿವೆ. ಒಳ್ಳೆಯ - ಕೆಟ್ಟ ಕಾರ್ಯಗಳು ಯಾವುವೂ ಆತನಿಂದ ಮರೆಯಾಗಿಲ್ಲ. ರೋಮಾಯ 2-16ರಲ್ಲಿ ಹೇಳಿದಂತೆ - *"ದೇವರು ಯೇಸುಕ್ರಿಸ್ತನ ಮೂಲಕವಾಗಿ ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನವು ಬರುತ್ತದೆ. ಆ ದಿನದಲ್ಲಿ ಇದೆಲ್ಲಾ ತಿಳಿದು ಬರುವುದು."*

ಎಸ್ತೇರ್ ರಾಣಿಯ ಔತಣವು ಹಾಮಾನನ ಪತನದ ಪ್ರಾರಂಭವಾಯಿತು. ಎರಡನೇ ದಿನ ಮತ್ತೊಂದು ಔತಣಕ್ಕೆ ಆಹ್ವಾನಿಸಿದ ಆಕೆಯು ಅರಸನ ಮುಂದೆ ತನ್ನ ದುಃಖವನ್ನು ತೋಡಿಕೊಂಡು ಯೆಹೂದ್ಯರ ಉಳಿವಿಗಾಗಿ ಬೇಡಿಕೊಂಡಳು. ಈ ದುಷ್ಕೃತ್ಯಕ್ಕೆ ಪ್ರಯತ್ನಿಸಿದವನು ಹಾಮಾನನೆಂದು ರಾಣಿಯ ಬಾಯಿಯಿಂದ ಕೇಳಿದ ಅರಸನು ರೌದ್ರಾವೇಶ ಹೊಂದಿದನು. ಹಾಮಾನನು ಎಸ್ತೇರ್ ರಾಣಿಯನ್ನು ತನ್ನ ಪ್ರಾಣರಕ್ಷಣೆಗಾಗಿ ಪರಿಪರಿಯಾಗಿ ಬೇಡಿಕೊಂಡನು. ಆದರೆ ಬಹಳ ತಡವಾಗಿತ್ತು. ಹಾಮಾನನು ಮೊರ್ದೆಕೈಗಾಗಿ ಗಲ್ಲುಮರವನ್ನು ಸಿದ್ಧಪಡಿಸಿದ್ದ ವಿಚಾರವನ್ನು ಸೇವಕನಿಂದ ತಿಳಿದ ಅರಸನು ಅದೇ ಗಲ್ಲುಮರದಲ್ಲಿ ಹಾಮಾನನ ಮರಣಶಿಕ್ಷೆಯನ್ನು ಆಜ್ಞಾಪಿಸಿದನು.

ದೇವರು ನಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ. ತನ್ನೊಂದಿಗೆ ತನ್ನನ್ನು ನಂಬಿ ರಕ್ಷಣೆಪಡೆದವರೆಲ್ಲರೂ ಪರಲೋಕದಲ್ಲಿ ಪಾಲುಗಾರರಾಗಬೇಕೆಂಬುದು ಆತನ ಅಪೇಕ್ಷೆಯಾಗಿದೆ. ಲೂಕ 15:7ರಲ್ಲಿ ಬರೆದಂತೆ - *"ದೇವರ ಕಡೆಗೆ ತಿರಿಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವುದು"*. ಅಲ್ಲದೆ ಅಹಷ್ವೇರೋಷ್ ರಾಜನ ಪೂರ್ವವೃತ್ತಾಂತ ಪುಸ್ತಕದಂತೆ ಇನ್ನೊಂದು ಪುಸ್ತಕದ ಕುರಿತು ಸತ್ಯವೇದದಲ್ಲಿ ಬರೆದಿದೆ - *"ಆಗ ಪುಸ್ತಕಗಳು ತೆರೆಯಲ್ಪಟ್ಟವು ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು. ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು"* (ಪ್ರಕಟಣೆ 20:12). ■